ಕೇಳಬೇಕು ಏನ ಮಾತ್ತಾಡಬೇಕೆಂದು ಗೊತ್ತಾಗದೇ, 'ಅವು ವಿಡಿಯೋ ನೋಡ್ತಿಯೇನು' ಎಂದು ಕೇಳಿಯೇ ಬಿಟ್ಟೆ.

'ನೋಡ್ತಿನಿ' ಎಂದು ಸರಾಗವಾಗಿ ಹೇಳಿದ. 'ಹೌದಾ..!' ಎಂದು ಅದು ಇದು ಕೇಳಿದ್ಯಾ. ನನ್ನ ಮನಸ್ಸಿನ ಸಂಕಟ ತಡಿಲಾರದೆ, 'ಮರಿಲಿಂಗ ಒಮ್ಮಿ ಯಾರಿಲ್ಲದಲ್ಲಿ ಹೋಗಣ, ಟೈಮ್ ಯಾವಾಗ ಕೊಡ್ತಿದೀ' ಎಂದು ಆಳುಕಿನಿಂದಲೇ ಕೇಳಿ ಮಲಗಿದ್ದಲ್ಲೇ ಒದ್ದಾಡಿದ್ದೆ ತಡ, 'ಯಾಕ' ಯೆಂದು ಕಳಿಸಿದ ಆತನ ರೀಪ್ಲೆಗೆ ನನ್ನ ಭ್ಯಾಳ ದಿನದ ಆಸೆಗಳನ್ನು ಪೂರಾ ಕುಲ್ಲಾಂ ಕುಲ್ಲಾ ಟೈಪ್ ಮಾಡಿ ಕಳಿಸಿಬಿಟ್ಟು ಒಂದು ಚಣ ಅವನ ರೀಪ್ಲೆ ಸಲುವಾಗಿ ಕಳಿಸ್ತಾನೋ ಇಲ್ಲನೋ ಎಂದು ಕಾದೆ. ಮೊದಲೊಮ್ಮಿ ಹುಡುಗನ್ನು ಕೇಳಿದ್ದೆ ಒಪ್ಪದೇ ಊರು ಮಂದಿಗೆಲ್ಲ ನನ್ನ ಮಾನ ಹರಾಜಿಗಿಟ್ಟದ್ದು ನೆನಪಾಗಿ ಇವನು ಹಂಗೆ ಮಾಡ್ತಾನೆನೋ ಎಂದು ಅನಸ್ತಿತ್ತು. ಅವ್ನು ಕುಡಿದಿದ್ದ ಕಾರಣಕ್ಕೊ ಏನೋ ಎಲ್ಲದಕ್ಕೊ, 'ಹ್ಞೂsss ಒಕೆss' ಎಂದು ರೀಪ್ಲೇ ಕೊಟ್ಟದ್ದು ನೋಡಿ ಮಲಗಿದ್ದವನು ನಿಮ್ಮನ್ ನಿಗುರಿ ಎದ್ದು ಕುಂತೆ. ಮೈಯೆಲ್ಲ ಉದ್ರೇಕಗೊಂಡಿತು. ಚಳಿ ಚಳಿಯಾದಂಗ ಅನಿಸಿ ನನಗಾದ ಬದಲಾವಣೆಯೆಲ್ಲ ಅವನಿಗೂ ಆಗಿರಬಹುದು ಎಂದುಕೊಂಡೆ. ತೀರ ತಡಕ್ಕಾಗದೆ ಒದ್ದಾಡಬೇಕು ಎನಿಸಿತು. ಮುಂದುವರೆದುಕೇಸಿ, 'ನೀನೆ ಮೊದಲು' ಎಂದೇಳಿದಕ್ಕೆ 'ಹ್ಞೂ' ಎಂದ. 'ಯಾರಿಗೂ ಹೇಳಬೇಡ, ದುಡ್ಡು ಬೇಕಾದ್ರೂ ಕೇಳು' ಎಂದು ಅವನಲ್ಲಿ ಆಸೆ ಹುಟ್ಟಿಸಿದೆ. ಅವನು ನನ್ನೆಲ್ಲ ಆಸೆಗಳಿಗೆ ಒಪ್ಪಿ ಸಿಗ್ನಲ್ ಕೊಟ್ಟು ಒಂದು ದಿನ ಸಿಗಮು ತಗೋರಿ ಎಂದೇಳಿದವ, 'ಸಿಗ್ತೀನಿ ತಗರೀ ಸಿಗ್ತೀನಿ...' ಎಂದೇಳಿದ. ಅವನೊಂದಿಗೆ ಚಾಟ್ ಮಾಡು ಮಾಡುತ್ತಲೇ ಚೆಣ್ಣ ಹಸಿ ಹಸಿಯಾದಂಗಾಗಿತ್ತು. ಕುಂಡಿತಿರಿವಿ ಬಿದ್ದ ಸುಮ್ಮಿನ ಟೊಂಕದಾಗ ಕೈಯಾಕಿ ಎಳಕೊಂಡು ಮೈ ಮ್ಯಾಗ ರಗ್ಗು ಎಳಕೊಂಡೆ.

* * *

ಮಗಳು ಮೈಮ್ಯಾಗ ಬಿದ್ದು ಅಡ್ಡ್ಯಾಡಿದಕ್ಕೆ ನಿದ್ದಿಯಿಂದ ಎಚ್ಚರಾಗಿ ಬುಸ್ಸೆಂದು ಕುಂತಾಗ ಮೈಯೆಲ್ಲ ಬಿಗೆ ಹೊಡದಂಗಾಯ್ತು. ತಲಿ ಒಮ್ಮಿಂದೊಮ್ಮಿಗೆ ಜಗ್ಗೆ ನೂಸಾಕತ್ತಿತ್ತು. ಸುಮ್ಮಿ ತಡಯಿಲ್ಲದೇ ಚಾವು ಮಾಡಿಕೊಟ್ಟಳು. ನೀರು ಕುಡಿದು ಚಾಹು ಕುಡ್ಯಾ. ಪೋನಿಗೆ ಪೋನ್ ಬಂದಿದ್ದು ಸದ್ದಾಗಿ ನೋಡಿದಾಗ ಅವನದ್ದಾಗಿರಲಿಲ್ಲ. ಅವನ ಮೆಸ್ಸೆಜು, ಅವನ ಕಾಲ್ ಬರದು ಬಿಟ್ಟು ಎಲ್ಲರವೂ ಬರ್ತಿದ್ದವು. ಅವ ಪೋನ್ ಮಾಡಿದ್ರೆ, ಮೆಸ್ಸೆಜು ಮಾಡಿದ್ರೆ ಹ್ಯೆಂಗ ಮಾಡಲಿ. ಬಸಲಿಂಗನೊಂದಿಗೆ ಸೇರಿದ ನೆನಪುಗಳು ತೇಲಿ ತೇಲಿ ಬರಾಕತ್ತಿದ್ದವು. ಮತ್ತೆ ಅವನಂತ ಗೆಳೆಯ ಸಿಗಂಗಿಲ್ಲೆಂದು ಮನಸ್ಸಿಗೆ ಅನಿಸಿತು ಅಷ್ಟೇ.

ಸುಮ್ಮಿ ಮನ್ಯಾಗಿದ್ದ ಗಂಗಳ ಚೆರಿಗಿ ಮ್ಯಾಗ ಸಿಟ್ಟು ತೋರಿಸದ್ಕ ನೆಲಕ ಬಿದ್ದು ದನಿ ಮಾಡ್ತಿದ್ವು. ಕೈಕಾಲಾಗ ಬಂದ ಮಗಳಿಗೆ ಬೆನ್ನಿಗೆ ಏಟು ತಿಂದು ರೆವ್ವ್ಯಾಗುಟ್ಟುತ್ತಾ ಬಗಲಾಗ ಬಂದು ಅಳಕತ್ತಿದಾಕಿಗೆ ಸುಮ್ಮಿರಿಸಿದರು ಬೆನ್ನಿಡಿದು ಅಳದೇ ಮಾಡಿತು. ಯಾರಿಗೂ ಅನ್ನಕ್ಕಾಗದೆ, ಯಾವುದು ತಲಿಗಾಕಿಕ್ಕೊಳ್ಳದೆ ಸುಮ್ಮಾದೆ. ನನ್ನ ಬಾಯಿಂದ ಎಲ್ಲ ತಿಳ್ಕಂಡವನು ನನ್ನ ಮರಿಯಾದೆ ತೆಗದ್ರ ಹ್ಯೆಂಗ ಅಂತ ಯೋಚ್ನೆ ಮಾಡದ್ರಾಗ ಪೋನಿಗೊಂದು ಮೆಸ್ಸೆಜು ಬಂತು. ಎಲ್ಲಾ ನೋಡಿದಂತೆ ಇದುನು ನೋಡಿದೆ 'ತಂಬಾಕು ದೊಡ್ಡಿಗಿ ಬಂದು ಬಿಡು' ಎಂದು ಮೆಸ್ಸೆಜ್ಜು ಹಾಕಿದ್ದ. ನೋಡಿ ಖುಷಿಯಾಯಿತು. ಒಮ್ಮಿಂದೊಮ್ಮಲೇ ಎದಿ ನಡಗು ಇಟ್ಟಿತ್ತು. ದಮ್ಮತ್ತಿವರಿಗೆ ಆದಂಗ ಆಗ್ತಿತ್ತು. ನೋಡಿ ಹೋಗದು ಹ್ಯೆಂಗಂತ ಯೋಚ್ನೆ ಬಂತು. ಏನೂ ತಿಳಿಲಿಲ್ಲ. ಏನೋ ಒಂದು ಮನಸ್ಸಿಗೆ ಸಮಾಧಾನ ಆದಂಗಾಯ್ತು. ಆದ್ರೆ ಹೋಗದು..? ಎಂದು ವಿಚಾರ ಮಾಡಕತ್ತಿದಾಗ ಸುಮ್ಮಿ ಅಡುಗೆ ಮನಿಯಿಂದ ಮಾರಿ ಕಂಗು ಮಾಡಿಕೊಂಡು ಹೊರಗ ಬರಣ ಅಕಡಿ ಒಮ್ಮಿ ಇಕಡಿ ಒಮ್ಮಿ ನೋಡಿ, 'ಮುಟ್ಟಾಗಿದ್ದೀನಿಯೇ ಪ್ಯಾಡ್ ತಂಗದು ಬಾ' ಎಂದು ಮೆಲ್ಲಕ ಹೇಳಿದವಳೇ ಬಚ್ಚಲಿನ ಬಾಗಿಲು ತೆರದಳು. ಕಣ್ಣು ಯಾಡ್ ಪಳ ಪಳ ಬಿಟ್ಟೆ. ಯಾಡು ತಿಂಗ್ಳ ಆಗಿದ್ರುನೂ ಮುಟ್ಟಾಗಲಾರದಕ್ಕ ಸೆರಗು ನಿಂತಾದ ಎಂದುಕೊಂಡು ಎದಿ ಹೊಡದಿದ್ದೆ. ಈಗೆನನ್ನು ಅನ್ನದಕ್ಕೆ ಆಡದಕ್ಕೆ ಬಾಯಿ ಬರದೇ ಖುಷಿಯೊಮ್ಮೆ ಸಿಟ್ಟೊಮ್ಮಿ ಏನೇನೋ ಬಂದಂಗ ಎನಿಸಿತು.

ನಿರವಿಲ್ಲದೇ ಆಳಾಕತ್ತಿದ್ದ ಮಗಳನ್ನು ಬಗಲಾಗ ಎತ್ತಿಕೊಂಡು ರಮಿಸಿಕಂತ ಪ್ಯಾಡ ತರಲು ಅಂಗಡಿ ಕಡೆ ನಡದಾಗ ಶತಮಾನದಿಂದ ಕಾದು ಕೆಂಡಕಾರಿದ ಸೂರ್ಯ ಮೆಲ್ಲಕ ತಂಪಾಗುತ್ತಾ ಮುಣಗತೊಡಗಿದ.

●